ಸೃಷ್ಟಿಸುತ್ತಿವೆ.

ಇಷ್ಟರಲ್ಲಿ ಹೋಗಿದ್ದ ವಿದ್ಯುತ್ ಮತ್ತೆ ಬಂದಿತ್ತು. ಎಮರ್ಜೆನ್ಸಿ ಲೈಟುಗಳು ಆರಿದವು. ಟೀವಿಯಲ್ಲಿ ಸಿಗ್ನಲ್ ಹೋಗಿತ್ತು.

ಕೊಠಡಿಯಲ್ಲಿ ಎಸಿ ಕೆಲಸ ಮಾಡುತ್ತಿತ್ತು. ಫ್ಯಾನುಗಳು ತಿರುಗುತ್ತಿದ್ದವು.

"ಶ್ಯಾಮಲಾ ಅವರೇ, ಪ್ರತ್ಯಕ್ಷವಾಗಿ ಸ್ವರ್ಗ, ನರಕಗಳನ್ನು ನಾವು ಈ ಕೊಠಡಿಯಲ್ಲೇ ಕುಳಿತು ನೋಡುತ್ತಿದ್ದೇವೆ. ಜನರ ಪರದಾಟವನ್ನು ಮಾಧ್ಯಮಗಳು ಸಮರ್ಥವಾಗಿ ಬಿಂಬಿಸುತ್ತಿವೆ. ಒಂದು ಮಾತ್ರ ನಿಜ! ನಾವು ಸದ್ಯಕ್ಕೆ ಫುಕುಶಿಮಾಗೆ ಹೋಗುವಂತಿಲ್ಲ..."

"ಅಷ್ಟು ಖಡಾಖಂಡಿತವಾಗಿ ಹೇಗೆ ಹೇಳ್ತೀರಿ ?"

"ಹೇಗೆ ಹೋಗ್ತೀವಿ? ಫುಕುಶಿಮಾನೆ ತೊಂದರೆಯಲ್ಲಿ ಸಿಲುಕಿದೆ. ನಾವು ಅಲ್ಲಿಗೆ ಹೋಗಲು ಸಂಪರ್ಕ ಸಾಧನಗಳಿಲ್ಲ..." ಮಾತನ್ನು ಒಂದು ಕ್ಷಣ ನಿಲ್ಲಿಸಿ ಏನನ್ನೋ ಜ್ಞಾಪಿಸಿಕೊಂಡವನಂತೆ ಮತ್ತೆ ಮಾತನ್ನು ಮುಂದುವರೆಸಿದ.

"ಶ್ಯಾಮಲಾ ನಿಮ್ಮ ಬಳಿ ಸಾಕಷ್ಟು ಆಹಾರ ಪದಾರ್ಥಗಳು, ಕುಡಿಯುವ ನೀರು ಇದೆಯಾ?''

''ಸಾಕಾಗುವಷ್ಟು ಅಂದ್ರೆ! ನಾಲ್ಕೈದು ದಿವಸಗಳಿಗಾಗುವಷ್ಟು ಇದೆ ಅಂದ್ಕೊಳ್ತೀನಿ."

"ಎಚ್ಚರಿಕೆಯಿಂದ ಬಳಸಿದರೆ ಹತ್ತು ದಿನಗಳಿಗೆ ಸಾಕಾಗಬಹುದು."

"ಅಂದ್ರೆ ಅರ್ಧ ಹೊಟ್ಟೆ ತುಂಬಿಸಿಕೊಂಡಾ?"

"ಪೂರ್ಣ ಪ್ರಮಾಣದಲ್ಲಿ ಹಸಿದುಕೊಂಡು ಇರುವುದಕ್ಕಿಂತ ಅರ್ಧ ಹೊಟ್ಟೆ ತುಂಬಿಸಿಕೊಂಡು ಇರುವುದು ಒಳ್ಳೆಯದಲ್ಲವೇ?"

ಅಷ್ಟರಲ್ಲಿ ಸೆಲ್ ರಿಂಗಣಿಸಿತ್ತು. ನಂಬರಿನ ಜೊತೆ ಕಾಣುತ್ತಿದ್ದ ಹೆಸರನ್ನು ಗಮನಿಸಿ, 'ನಮ್ಮ ಮೆಹತಾ...' ಎನ್ನುತ್ತಾ ಫೋನ್ ರಿಸೀವ್ ಮಾಡಿದ ಜಿತೇಂದ್ರ.

"ಜಿತೇಂದ್ರ, ಎಲ್ಲಿದ್ದೀರಿ? ಹೇಗಿದ್ದೀರಿ?"

"ಶ್ಯಾಮಲಾ ಅವರ ಅಪಾರ್ಟ್‌ಮೆಂಟಿನಲ್ಲಿ. ಇಲ್ಲಿವರೆಗೂ ಕ್ಷೇಮ, ಮುಂದಿನದು ಗೊತ್ತಿಲ್ಲ. ನೀವು... ನೀವು ಫುಕುಶಿಮಾ ವಲಯದಲ್ಲೇ ಇದ್ದೀರಾ? ಅಲ್ಲಿಂದ ಸುರಕ್ಷಿತ ಪ್ರದೇಶಕ್ಕೆ..."

"ಇಲ್ಲ ಜಿತೇಂದ್ರ. ನಿಮಗೆ ಫೋನ್ ಮಾಡೋಕೆ ಮುಂಚೆ ಭಾರತ ರಾಯಭಾರ ಕಚೇರಿಯಿಂದ ಫೋನ್ ಬಂದಿತ್ತು. ಅವರೂ ನೀವು ಹೇಳಿದ ಮಾತನ್ನೇ ಹೇಳಿದ್ರು. ಜಪಾನ್ ಸರ್ಕಾರ ಕೂಡ ಒತ್ತಡ ಹೇರ್ತಿದೆ. ಫುಕುಶಿಮಾ ಭದ್ರತಾ ಅಧಿಕಾರಿಯಾಗಿದ್ಕೊಂಡು ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ನನ್ನ ಪ್ರಾಣ ಕಾಪಾಡಿಕೊಳ್ಳಲು ನನ್ನ ಕರ್ತವ್ಯ, ಜವಾಬ್ದಾರಿಗಳಿಗೆ ಬೆನ್ನು ತೋರಿಸಿ ಪಲಾಯನ ಮಾಡೋದಕ್ಕೆ ಆತ್ಮಸಾಕ್ಷಿ ಒಪ್ಪುತ್ತಿಲ್ಲ. ಅದಕ್ಕೆ ನಾನು ನನ್ನ ಕುಟುಂಬದವರು ಇಲ್ಲೇ ಇರುವ ತೀರ್ಮಾನಕ್ಕೆ ಬಂದಿದ್ದೇವೆ."

"ಅಣು ವಿಕಿರಣದ

